04/09/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ಜ್ಞಾನಸಾಗರ ತಂದೆಯಿಂದ ಆಸ್ತಿಯನ್ನು ತೆಗೆದುಕೊಳ್ಳಬೇಕೆಂದರೆ ಸಂಪೂರ್ಣ ಒತ್ತಡ ಹಾಕಿ, ಪರಿಶ್ರಮ ಪಟ್ಟು ವಿದ್ಯೆಯನ್ನು ಅವಶ್ಯವಾಗಿ ಓದಬೇಕಾಗಿದೆ, ವಿದ್ಯೆಯಿಂದಲೇ ರಾಜ್ಯಭಾಗ್ಯ ಅಥವಾ ಜೀವನ್ಮುಕ್ತಿಯ ಪದವಿಯು ಪ್ರಾಪ್ತಿ ಆಗುತ್ತದೆ"

ಪ್ರಶ್ನೆ: ಜ್ಞಾನಮಾರ್ಗದಲ್ಲಿ ಸದಾಕಾಲ ಖಾಯಂ ಆಗಿ ಯಾರು ಉಳಿಯಲು ಸಾಧ್ಯ? ಶ್ರೇಷ್ಠ ಪದವಿಯ ಆಧಾರ ಏನಾಗಿದೆ?

ಉತ್ತರ: ಯಾರಿಗೆ ವಿದ್ಯೆಯ ಹೊರತು ಅನ್ಯ ಯಾವುದೇ ಮಾತುಗಳಲ್ಲಿ ಅಭಿರುಚಿ ಇರುವುದಿಲ್ಲ, ಜ್ಞಾನದ ಪರಿಪಕ್ವ ಅವಸ್ಥೆಯಿದೆ, ಅವರೇ ಈ ಜ್ಞಾನ ಮಾರ್ಗದಲ್ಲಿ ಖಾಯಂ ಆಗಿ ಉಳಿಯಲು ಸಾಧ್ಯ. ಬಾಕಿ ಧ್ಯಾನದಲ್ಲಿ ಹೋಗುವ, ಸಾಕ್ಷಾತ್ಕಾರ ಮಾಡುವ ಆಸೆ ಇಟ್ಟುಕೊಂಡಿರುವಂತಹವರಿಗೆ, ಆಟ-ಪಾಠದಲ್ಲಿರುವವರಿಗೆ ಇದರಲ್ಲಿ ಯಾವುದೇ ಲಾಭವಿಲ್ಲ, ಇದರಲ್ಲಿ ಮಾಯೆಯೂ ಪ್ರವೇಶವಾಗಿಬಿಡುತ್ತದೆ, ನಂತರ ತಂದೆಯ ಕೈಯನ್ನು ಮತ್ತು ವಿದ್ಯೆಯನ್ನು ಬಿಟ್ಟುಬಿಡುತ್ತಾರೆ. ಶ್ರೇಷ್ಠಪದವಿಗಾಗಿ ವಿದ್ಯೆಯ ಕಡೆ ಪೂರ್ಣ ಗಮನ ಕೊಡುವ ಅವಶ್ಯಕತೆ ಇದೆ.

ಗೀತೆ: ನೀವೇ ತಾಯಿ ಆಗಿದ್ದೀರಿ............

ಓಂ ಶಾಂತಿ. ಓಂ ಶಾಂತಿಯ ಅರ್ಥವನ್ನು ಮಕ್ಕಳಿಗೆ ತಿಳಿಸಲಾಗಿದೆ. ಯಾವುದೇ ಧಾರ್ಮಿಕ ಮನೋಭಾವವುಳ್ಳ ಅಥವಾ ಧರ್ಮಾತ್ಮ ಪುರುಷರಿರುತ್ತಾರೆ, ಮಠ-ಮಂದಿರಗಳಿಗೆ ಹೋಗುತ್ತಾರೆಂದರೆ ಅವರ ಬಾಯಿಯಿಂದ ಓಂಶಾಂತಿ ಎಂಬ ಶಬ್ದ ಬರುತ್ತದೆ. ಆದರೆ ಅದರ ಅರ್ಥವನ್ನು ಅವರು ತಿಳಿದುಕೊಂಡಿಲ್ಲ. ನಾವೂ ಸಹ ಹೇಳುತ್ತೇವೆ ಓಂಶಾಂತಿ, ಅಹಂ ಆತ್ಮ. ಆತ್ಮ ಎಂಬ ಅಕ್ಷರ ಖಂಡಿತ ಬರುತ್ತದೆ. ಪರಮ-ಆತ್ಮ ಅಥವಾ ಆತ್ಮ ಹೇಳುತ್ತದೆ ಓಂಶಾಂತಿ. ನಾನು ಯಾರು ಆತ್ಮನಾಗಿದ್ದೇನೆ, ನನ್ನ ಸ್ವಧರ್ಮ ಶಾಂತಿಯಾಗಿದೆ. ಆತ್ಮವು ತನ್ನ ಕರ್ತವ್ಯವನ್ನು ತಿಳಿಸುತ್ತದೆ. ತಂದೆಯೂ ಸಹ ಹೇಳುತ್ತಾರೆ ಓಂಶಾಂತಿ. ನಾನೂ ಸಹ ಆತ್ಮನಾಗಿದ್ದೇನೆ ಆದರೆ ನನ್ನನ್ನು ಪರಮ ಆತ್ಮನೆಂದು ಕರೆಯುತ್ತಾರೆ ಏಕೆಂದರೆ ನಾನು ಸದಾಕಾಲ ಪರಮಧಾಮದಲ್ಲಿ ಇರುತ್ತೇನೆ. ನಾನು ಜನನ-ಮರಣದಲ್ಲಿ ಬರುವುದಿಲ್ಲ. ತಂದೆಯು ಸಮ್ಮುಖದಲ್ಲಿ ಬಂದು ತಿಳಿಸುತ್ತಾರೆ ನೀವು ಪುನರ್ಜನ್ಮದಲ್ಲಿ ಬರುತ್ತೀರಿ, ನೀವು ದೇಹಧಾರಿಗಳಾಗಿದ್ದೀರಿ. ಸೂಕ್ಷ್ಮವತನವಾಸಿಗಳೂ ಸಹ ಸೂಕ್ಷ್ಮದೇಹಧಾರಿಗಳಾಗಿದ್ದಾರೆ. ನಾನು ಇವರಿಂದಲೂ ಸಹ ದೂರವಾಗಿದ್ದೇನೆ, ನನಗೆ ಯಾವುದೇ ಸ್ಥೂಲ ಶರೀರವಿಲ್ಲ, ಸೂಕ್ಷ್ಮ ಶರೀರಧಾರಿಗಳಿಗೆ ಹೇಳಲಾಗುತ್ತದೆ-ಇವರು ಬ್ರಹ್ಮಾ, ಇವರು ವಿಷ್ಣು, ಇವರು ಶಂಕರ ಎಂದು. ಹೆಸರಂತೂ ಶರೀರದ್ದಾಗಿದೆಯಲ್ಲವೇ. ಆತ್ಮದ್ದಂತೂ ಅಲ್ಲ. ಆತ್ಮವು ಶರೀರವನ್ನು ಧಾರಣೆ ಮಾಡುತ್ತದೆ, ಆಗ ಶಾರೀರಕ್ಕೆ ಹೆಸರನ್ನು ಇಡಲಾಗುತ್ತದೆ. ಯಾರಾದರೂ ಸತ್ತರೆಂದರೆ ಅವರು ಶರೀರ ಬಿಟ್ಟರು ಎಂದು ಹೇಳುತ್ತಾರೆ. ಹೆಸರಂತೂ ಶರೀರದ ಮೇಲೆ ಉಳಿದುಬಿಡುತ್ತದೆ ಮತ್ತೆ ಮತ್ತೊಂದು ಶರೀರವನ್ನು ತೆಗೆದುಕೊಳ್ಳುತ್ತದೆ. ಪರಮಪಿತ ಪರಮಾತ್ಮನಿಗಂತೂ ಈ ರೀತಿ ಹೇಳುವುದಿಲ್ಲ ಅವರು ಒಂದು ಶರೀರವನ್ನು ಬಿಟ್ಟು ಇನ್ನೊಂದನ್ನು ಪಡೆದರು ಎಂದು. ಎಲ್ಲರ ಶರೀರಕ್ಕೆ ಹೆಸರು ಇರುತ್ತದೆ. ನೀವು ಮಕ್ಕಳು ನನ್ನವರಾಗುತ್ತೀರೆಂದರೆ ನಿಮಗೂ ಸಹ ಮತ್ತೊಂದು ಹೆಸರನ್ನು ಕೊಡುತ್ತೇನೆ. ಹೇಗೆ ಗುರುಜನರು ಸಹ ಹೆಸರನ್ನು ಕೊಡುತ್ತಾರಲ್ಲವೇ ಹಾಗೆ. ಇತ್ತೀಚಿನ ದಿನಗಳಲ್ಲಿ ಕನ್ಯೆ ಮದುವೆ ಮಾಡಿಕೊಳ್ಳುತ್ತಾಳೆಂದರೆ ಅವಳ ಹೆಸರನ್ನು ಬದಲಾಯಿಸುತ್ತಾರೆ. ಪುರುಷರ ಹೆಸರು ಬದಲಾಗುವುದಿಲ್ಲ ಏಕೆಂದರೆ ಪುರುಷನು ತನ್ನ ಹೆಸರಿನೊಂದಿಗೆ ವ್ಯವಹಾರ ಮಾಡಬೇಕಾಗುತ್ತದೆ. ಮಾತೆಯರಿಗಂತೂ ವ್ಯವಹಾರ ಇರುವುದಿಲ್ಲ. ಆದ್ದರಿಂದ ಇವರ ಹೆಸರನ್ನು ಬದಲಾಯಿಸಬಹುದಾಗಿದೆ. ಪುರುಷರಿಗಂತೂ ಇನ್ಶ್ಯೂರೆನ್ಸ್, ವ್ಯಾಪಾರ ಮುಂತಾದವುಗಳಲ್ಲಿ ಹೆಸರು ಇರುತ್ತದೆಯಲ್ಲವೇ. ಈಗ ತಂದೆಯು ತಿಳಿಸುತ್ತಾರೆ-ಎಲ್ಲರೂ ನೆನಪು ಮಾಡುತ್ತಾರೆ, ನೀವು ಮಾತಾ-ಪಿತ ರಾಗಿದ್ದೀರಿ ಮತ್ತು ಜೊತೆಗಾರರಾಗಿದ್ದೀರಿ, ಅಂಬಿಗನಾಗಿದ್ದೀರಿ, ನೀವು ನಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವಿರಿ ಎಂದು. ನೋಡಿ ಎಷ್ಟೊಂದು ಸಂಬಂಧದಲ್ಲಿ ಬರುತ್ತಾರೆ. ಶರೀರವನ್ನು ಬಿಟ್ಟು ಮತ್ತೆ ನಮ್ಮ ಜೊತೆ ಬರಬೇಕಾಗಿದೆ. ನೀವು ಮಕ್ಕಳಿಗೆ ತಿಳಿದಿದೆ-ಅಂಬಿಗ ನಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ.

ತಂದೆಯದು ಎಷ್ಟೊಂದು ಮಹಿಮೆ ಇದೆ! ಅವರು ಮತ್ತೆ ಯಾವಾಗ ಬರುತ್ತಾರೆ? ಅವರು ಯಾವಾಗ ಬಂದು ಜೊತೆಗಾರನಾಗುತ್ತಾರೋ ಎಂದು ತಿಳಿದಿಲ್ಲ. ಯಾವಾಗ ಭಕ್ತಿಮಾರ್ಗದ ಅಂತ್ಯವಾಗುತ್ತದೋ ಆಗ ಭಕ್ತರ ರಕ್ಷಣೆಯನ್ನು ಮಾಡಲು ನಾನು ಬರಬೇಕಾಗುತ್ತದೆ ಎಂದು ಹೇಳುತ್ತಾರೆ. ನಾನು ಅಂಬಿಗನಾಗಿ ಮರಳಿ ಕರೆದುಕೊಂಡು ಹೋಗಬೇಕಾಗುತ್ತದೆ. ಅವರು ಹೇಗೆ ಬಂದು ಮಾತಾ-ಪಿತರಾಗಿದ್ದಾರೆಂದು ನೀವು ತಿಳಿದಿದ್ದೀರಿ. ಅವರಿಗೆ ಅಂಬಿಗ, ಗುರು ಎಂದು ಹೇಳಲಾಗುತ್ತದೆ. ಕೊಳಕು ಪ್ರಪಂಚ ತಮ್ಮ ಜೀವನಬಂಧನದಿಂದ ಜೀವನ ಮುಕ್ತಿಯಲ್ಲಿ ಕರೆದುಕೊಂಡು ಹೋಗುತ್ತಾರೆ ಆದ್ದರಿಂದ ಅವರನ್ನು ಪತಿತಪಾವನ, ಅಂಬಿಗ ಎಂದು ಹೇಳಲಾಗುತ್ತದೆ. ಸತ್ಯಯುಗಕ್ಕೆ ಹೊಸ ಪ್ರಪಂಚ ಎಂದು ಹೇಳಲಾಗುತ್ತದೆ. ಪ್ರಪಂಚವಂತೂ ಇದೇ ಆಗಿದೆ. ಕೇವಲ ಹಳೆಯ ಪ್ರಪಂಚದ ವಿನಾಶ ಆಗುತ್ತದೆ. ಹೇಗೆ ಹಳೆಯ ಮನೆಯಲ್ಲಿ ಇದ್ದುಕೊಂಡು ಹೊಸಮನೆಯನ್ನು ಮಾಡಿ ಹಳೆಯದನ್ನು ಬಿಟ್ಟು

ಹೊಸ ಮನೆಗೆ ಹೋಗುತ್ತಾರಲ್ಲವೇ. ಯಾವಾಗ ಸ್ಥಾಪನೆ ಆಗುತ್ತದೋ ಆಗ ಈ ಹಳೆಯ ಪ್ರಪಂಚದ ವಿನಾಶ ಆಗುತ್ತದೆ. ತ್ರಿಮೂರ್ತಿ ಅರ್ಥವನ್ನೂ ಸಹ ತಿಳಿಸಲಾಗಿದೆ, ಬ್ರಹ್ಮನ ಮೂಲಕ ಸ್ವರ್ಗದ ಸ್ಥಾಪನೆ ಮಾಡುವುದು ಇದು ಪರಮಪಿತ ಪರಮಾತ್ಮನ ಕಾರ್ಯವಾಗಿದೆ. ಅವರ ಮೂಲಕ ಮಾಡಿಸುತ್ತಾರೆ ಏಕೆಂದರೆ ಮಾಡಿ ಮಾಡಿಸುವವರಾಗಿದ್ದಾರೆ. ತಂದೆ ಬಂದು ಸಮ್ಮುಖದಲ್ಲಿ ತಿಳಿಸುತ್ತಾರೆ. ಬ್ರಹ್ಮಾರವರ ಮೂಲಕ ಸಹಜ ರಾಜಯೋಗ ಮತ್ತು ಜ್ಞಾನವನ್ನು ನೀವು ಬ್ರಹ್ಮಾ ಮುಖವಂಶಾವಳಿಗಳಿಗೆ ಕುಳಿತು ಕಲಿಸುತ್ತೇನೆ. ಭವಿಷ್ಯದ 21 ಜನ್ಮದವರೆಗೆ ನೀವೇ ದೇವೀ-ದೇವತೆಗಳ ಪದವಿಯನ್ನು ನಂಬರ್ವಾರ್ ಪುರುಷಾರ್ಥದನುಸಾರ ಪಡೆಯುತ್ತೀರಿ.

ನಾವು ಮಾತಾ-ಪಿತಾರವರಿಂದ ಓದುತ್ತಿದ್ದೇವೆ. ಇದು ಈಶ್ವರೀಯ ವಿಶ್ವವಿದ್ಯಾಲಯವಾಗಿದೆ ಎಂಬುದನ್ನು ತಿಳಿದಿದ್ದೀರಿ. ಒಂದುವೇಳೆ ವಿದ್ಯೆಯನ್ನು ಬಿಟ್ಟರೆ ಇವರ ಭಾಗ್ಯದಲ್ಲಿಲ್ಲವೆಂದು ತಿಳಿದುಕೊಳ್ಳಲಾಗುತ್ತದೆ. ಶಾಲೆಯಂತೂ ನಡೆಯಲೇಬೇಕು. ತಂದೆಯು ಬಂದು ಈ ಬ್ರಹ್ಮಾರವರ ಮೂಲಕ ಓದಿಸುತ್ತಾರೆ. ಮಕ್ಕಳು ಭಲೇ ಎಲ್ಲಿಯೇ ಇದ್ದರೂ ಸಹ ಯಾವುದೇ ಸೇವಾಕೇಂದ್ರದಲ್ಲಿ ಇದ್ದರೂ, ತಿಳಿದುಕೊಳ್ಳಿ ಜ್ಞಾನಸಾಗರ ಪರಮಪಿತ ಪರಮಾತ್ಮನಿಂದ ನಮಗೆ ಜೀವನ್ಮುಕ್ತಿಯ ಅಥವಾ ರಾಜ್ಯಭಾಗ್ಯದ ಆಸ್ತಿಯನ್ನು ಪಡೆಯಬೇಕೆಂದು ತಿಳಿದಿದ್ದೀರಿ. ಒಂದುವೇಳೆ ವಿದ್ಯೆಯನ್ನು ಬಿಟ್ಟುಬಿಟ್ಟರೆಂದರೆ ಆಸ್ತಿಯನ್ನು ಪಡೆಯಲು ಸಾಧ್ಯವಿಲ್ಲ. ತಂದೆಯಂತೂ ಜೊತೆಯಲ್ಲಿ ಕರೆದುಕೊಂಡು ಹೋಗಲು ಬಂದಿದ್ದಾರೆ. ಹೊಸ ಪ್ರಪಂಚದ ಸ್ಥಾಪನೆ ಆಗುತ್ತದೆ ಮತ್ತು ಎಲ್ಲರನ್ನು ಅಂಬಿಗ ಮರಳಿ ಕರೆದುಕೊಂಡು ಹೋಗುತ್ತಾರೆ. ನೀವು ಅಂಬಿಗನನ್ನೂ ಸಹ ತಿಳಿದಿದ್ದೀರಿ, ಮತ್ತು ಯಾರ ಮೂಲಕ ಸ್ಥಾಪನೆ ಹಾಗೂ ವಿನಾಶ, ಪಾಲನೆ ಮಾಡಿಸುತ್ತಾರೆ ಅವರನ್ನೂ ಸಹ ನೀವು ತಿಳಿದಿದ್ದೀರಿ. ನಂತರ ಈ ವಿದ್ಯೆಯಿಂದ ಯಾರು ಲಕ್ಷ್ಮೀ-ನಾರಾಯಣರಾಗಿ ರಾಜ್ಯ ಮಾಡುತ್ತಾರೋ ಅವರನ್ನೂ ಸಹ ನೀವು ತಿಳಿದಿದ್ದೀರಿ. ನಾವು ಈ ವಿದ್ಯೆಯಿಂದಲೇ ರಾಜ್ಯಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತೇವೆ ಯಾರು ಎಷ್ಟು ಓದುತ್ತಾರೆಯೋ......... ಓದಲಿಲ್ಲವೆಂದರೆ ಪದವಿ ಭ್ರಷ್ಟವಾಗುತ್ತದೆ. ಇದು ರಾಜಯೋಗದ ವಿದ್ಯೆಯಾಗಿದೆ. ಬಹಳ ಮಕ್ಕಳು ವಿದ್ಯೆಯನ್ನು ಓದುತ್ತಾ-ಓದುತ್ತಾ ಸುಸ್ತಾಗಿಬಿಡುತ್ತಾರೆ. ಓದಲಿಲ್ಲವೆಂದರೆ ಅರ್ಥ ಸುಸ್ತಾಗಿಬಿಟ್ಟಿದ್ದಾರೆಂದು ಅಷ್ಟೇ. ಮುಂದೆ ನಾವು ಓದುವುದಿಲ್ಲವೆಂದು ಹೇಳಿಬಿಡುತ್ತಾರೆ. ಈ ಓದಿನಲ್ಲಿ ಖರ್ಚಿನ ಮಾತಿಲ್ಲ. ಆ ಓದಿನಲ್ಲಿ ಬಡವರು ಓದಲು ಹಣವನ್ನು ಕೊಡಲು ಸಾಧ್ಯವಿಲ್ಲವೆಂದರೆ ಓದುವುದನ್ನು ಬಿಟ್ಟುಬಿಡುತ್ತಾರೆ. ಆದರೆ ಯಾರಿಗೆ ಓದುವಂತಹ ಉತ್ಸಾಹವಿರುತ್ತದೆಯೋ ಅವರು ನಾವು ಓದಲು ಬಯಸುತ್ತೇವೆ ಆದರೆ ನಮ್ಮ ಬಳಿ ಹಣವಿಲ್ಲವೆಂದು ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತಾರೆ ಮತ್ತೆ ಅವರಿಗೆ ಸರ್ಕಾರ ಹಣ ಕೊಡುತ್ತದೆ. ಹೇಗಾದರೂ ಮಾಡಿ ನಾನು ಓದಲು ಬಯಸುತ್ತೇನೆ, ನನ್ನ ತಂದೆಯ ಬಳಿ ಹಣವಿಲ್ಲವೆಂದು ವಿನಂತಿಸಿಕೊಳ್ಳುತ್ತಾರೆ. ಸರ್ಕಾರದ ಬಳಿ ಹಣವಿಲ್ಲದೆ ಇರುವ ಕಾರಣ ತಿರಸ್ಕರಿಸಿಬಿಡುತ್ತಾರೆ. ನಾವಂತೂ ಓದಲೇಬೇಕು. ಮತ್ತೇನು ಮಾಡುವುದು? ದೊಡ್ಡ ಶ್ರೀಮಂತರು ಅಥವಾ ದಾನಿಗಳ ಬಳಿ ಹೋಗುತ್ತಾರೆ. ನಮ್ಮ ಮಾತಾಪಿತರು ಬಡವರಿದ್ದಾರೆ. ನಾವು ಓದಿ ಸರ್ವೀಸ್ ಮಾಡಬಯಸುತ್ತೇವೆ. ತಾವು ನಮಗೆ ಸಹಾಯ ಮಾಡಲು ಸಾಧ್ಯವಿದೆಯೇ? ಧಾರ್ಮಿಕ ಮನೋಭಾವವುಳ್ಳಂತಹವರು ಯಾರಿರುತ್ತಾರೆಯೋ ಅವರು ಸಹಾಯ ಮಾಡುತ್ತಾರೆ. ಕನ್ಯೆಯರು ಈ ರೀತಿ ವಿನಂತಿಸಿಕೊಳ್ಳಲು ಸಾಧ್ಯವಿಲ್ಲ. ಪುರುಷರು ಮಾಡಬಹುದಾಗಿದೆ, ಓದಿನಿಂದ ಬಹಳಷ್ಟು ಸಂಪಾದನೆ ಇರುತ್ತದೆ. ಇದು ವಿದ್ಯೆಯೂ ಸಹ ಆಗಿದೆ ಮತ್ತು ವ್ಯಾಪಾರವೂ ಸಹ ಆಗಿದೆ. ತಂದೆಯು ವ್ಯಾಪಾರಿ, ರತ್ನಾಗಾರ ಮತ್ತು ಜ್ಞಾನಸಾಗರರಾಗಿದ್ದಾರೆ.

ಮಾತಾ-ಪಿತ ಬೇಹದ್ದಿನ ಜ್ಞಾನಸಾಗರ ತಿಳಿಸುತ್ತಾರೆ. ನಾನು ಕಲ್ಪದ ಹಿಂದಿನಂತೆ ನಿಮಗೆ ರಾಜಯೋಗವನ್ನು ಕಲಿಸಿ ರಾಜರಿಗೂ ರಾಜರನ್ನಾಗಿ ಮಾಡುತ್ತೇನೆ. ಎಲ್ಲಾ ಮಾತುಗಳನ್ನು ಧಾರಣೆ ಮಾಡಬೇಕಾಗಿದೆ. ಚಿಕ್ಕ ವಯಸ್ಸಿನವರು ಬುದ್ಧಿಯಲ್ಲಿ ಚೆನ್ನಾಗಿ ಧಾರಣೆ ಮಾಡಲು ಸಾಧ್ಯವಿದೆ. ಎಲ್ಲವೂ ಬುದ್ಧಿಯನ್ನು ಅವಲಂಬಿಸಿದೆ. ಕೆಲವರು ಸತೋಪ್ರಧಾನ, ಕೆಲವರದು ರಜೋ, ಕೆಲವರದು ತಮೋಬುದ್ಧಿಯಾಗಿದೆ. ಆ ಶಾಲೆಯಲ್ಲೂ ಸಹ ವಿದ್ಯಾರ್ಥಿಗಳ ಬುದ್ಧಿ ಹೇಗಿದೆ ಎಂಬುದು ತಿಳಿದಿರುತ್ತದೆ. ಸತೋಪ್ರಧಾನ ಬುದ್ಧಿವುಳ್ಳವರು ಪಾಸ್ವಿತ್ಹಾನರ್ ಆಗುತ್ತಾರೆ. ಅವರನ್ನೇ ಮಾನಿಟರ್ನಾಗಿ ಮಾಡುತ್ತಾರೆ. ಸ್ಕಾಲರ್ಶಿಪ್ ಸಹ ಸಿಗುತ್ತದೆ. ಇದು ಬೇಹದ್ದಿನ ಶಾಲೆಯಾಗಿದೆ. ಇದರಲ್ಲಿ ಸತೋ-ರಜೋ-ತಮೋ ಬುದ್ಧಿಯಾಗಿದೆ. ಇಲ್ಲಿ ಪದವಿಯಂತೂ ಒಂದೇ ಆಗಿದೆ. ಇದು ರಾಜಯೋಗವಾಗಿದೆ, ಈಶ್ವರೀಯ ಓದು ಒಂದೇ ಆಗಿದೆ. ನಾನು ನೀವೆಲ್ಲಾ ಮಕ್ಕಳಿಗೆ ರಾಜಯೋಗವನ್ನು ಕಲಿಸುತ್ತೇನೆಂದು ತಂದೆಯು ಹೇಳುತ್ತಾರೆಂದಾಗ ಎಷ್ಟು ಪುರುಷಾರ್ಥವನ್ನು ಮಾಡುತ್ತಾರೆಯೋ ಅಷ್ಟು ಪದವಿಯನ್ನು ಪಡೆಯುತ್ತಾರೆ. ಶ್ರೇಷ್ಠ ಪದವಿಯನ್ನಂತೂ ತಿಳಿದಿದ್ದೀರಿ. ನಂಬರ್ವಾರ್ ಪದವಿಯನ್ನು ಪಡೆಯುತ್ತೀರಿ. ತಂದೆಗಂತೂ ಎಲ್ಲರ ಮೇಲೂ ಪ್ರೀತಿ ಇದೆ. ಎಲ್ಲರನ್ನು ಮಾಯೆಯ ಪಂಜರದಿಂದ ಬಿಡಿಸಲು ಬಂದಿದ್ದಾರೆ. ನಾನು ಕಲ್ಪ-ಕಲ್ಪವು ರಾಜಯೋಗವನ್ನು ಕಲಿಸಲು ಬರುತ್ತೇನೆ ಎಂದು ಆದರೆ ಈ ರೀತಿ ಮತ್ತ್ಯಾರೂ ಸಹ ಹೇಳಲು ಸಾಧ್ಯವಿಲ್ಲ. ಇದನ್ನು ತಂದೆಯೇ ಹೇಳುತ್ತಾರೆ. ಕಲ್ಪ-ಕಲ್ಪ, ಕಲ್ಪದ ಸಂಗಮಯುಗದಲ್ಲಿ ಬರುತ್ತೇನೆ. ಮನುಷ್ಯರು ಯುಗ-ಯುಗದಲ್ಲಿಯೂ ಬರುತ್ತಾರೆ ಎಂದು ಹೇಳಿ ಎಷ್ಟು ತಪ್ಪು ಮಾಡಿದ್ದಾರೆ. ನಾನು ಪತಿತಪಾವನನಾಗಿದ್ದೇನೆ ಎಂದು ತಂದೆಯು ಹೇಳುತ್ತಾರೆ. ನಾನು ನಿಮ್ಮನ್ನು ಪಾವನರಾನ್ನಾಗಿ ಮಾಡಲು ಕಲಿಯುಗದ ಅಂತ್ಯ, ಸತ್ಯಯುಗದ ಆದಿಯಲ್ಲಿ ಅಂದರೆ ಸಂಗಮಯುಗದಲ್ಲಿ ಬರುತ್ತೇನೆ. ಈ ಸಮಯದಲ್ಲಿ ತಂದೆಯು ಬಂದಿದ್ದಾರೆ ಎಂದರೆ ಚೆನ್ನಾಗಿ ಓದಬೇಕು, ವಿನಾಶವೂ ಸಹ ಆಗಲಿದೆ. ಸಂಪೂರ್ಣ ಒತ್ತುಕೊಟ್ಟು ಬಹಳ ಪರಿಶ್ರಮಪಟ್ಟು ಓದಬೇಕು, ಸಾಹಸವನ್ನು

ತೋರಿಸಬೇಕು. ಓದುವುದನ್ನು ಬಿಡಬಾರದು. ಯಾರು ಓದುವುದನ್ನು ಬಿಡುತ್ತಾರೆಯೋ ಅವರು ಅನುತ್ತೀರ್ಣರಾಗಿಬಿಡುತ್ತಾರೆ. ಮಕ್ಕಳಿಗೆ ಎಚ್ಚರ ನೀಡಲಾಗುತ್ತದೆ, ಯಾವುದೇ ಕಾಮ, ಕ್ರೋಧ, ಲೋಭ, ಮೋಹದ ಭೂತಗಳು ಬರಬಾರದು. ಮನಸ್ಸಿನ ದರ್ಪಣದಲ್ಲಿ ತನ್ನನ್ನು ನೋಡಿಕೊಳ್ಳುತ್ತಾ ಇರಿ - ಲಕ್ಷ್ಮಿಯನ್ನು ವರಿಸಲು ಯೋಗ್ಯನಾಗಿದ್ದೇನೆಯೇ? ನಾರದನದ್ದೂ ಸಹ ಒಂದು ದೃಷ್ಟಾಂತವನ್ನು ಕೊಡಲಾಗಿದೆ. ನೀವೆಲ್ಲರೂ ಸಹ ಭಕ್ತರಾಗಿದ್ದೀರಲ್ಲವೇ. ಭಕ್ತಿಮಾರ್ಗದಲ್ಲಿ ಪುರುಷರಲ್ಲಿ ನಾರದ ಉತ್ತಮನೆಂದು ಗಾಯನ ಮಾಡಲ್ಪಟ್ಟಿದೆ ಮತ್ತು ಸ್ತ್ರೀಯರಲ್ಲಿ ಮೀರಾ. ಅದು ಭಕ್ತಿಮಾರ್ಗವಾಗಿದೆ. ಜ್ಞಾನಮಾರ್ಗದಲ್ಲಿ ನೋಡುತ್ತೀರಿ ಮಮ್ಮಾ-ಬಾಬಾರವರ ಹೆಸರು ಪ್ರಸಿದ್ಧವಾಗಿದೆ, ಅವರ ವಿಜಯ ಮಾಲೆಯೂ ಸಹ ಮಾಡಲ್ಪಟ್ಟಿದೆ. ಯಾರು ಸುಖವನ್ನು ನೀಡುತ್ತಾರೆಯೋ ಅವರ ಸ್ಮರಣೆಯನ್ನು ಮಾಡಲಾಗುತ್ತದೆ, ಅವರ ನೆನಪಾರ್ಥವನ್ನು ಮಾಡುತ್ತಾರೆ. ಅವರು ಏನನ್ನು ಮಾಡಿದ್ದಾರೆ? ಕೆಲವರು ಕಾಲೇಜನ್ನು ತೆರೆದಿರುತ್ತಾರೆ, ದಾನ-ಪುಣ್ಯವನ್ನು ಬಹಳಷ್ಟು ಮಾಡಿರುತ್ತಾರೆ ಮತ್ತೇನು ಮಾಡುತ್ತಾರೆ? ಈಗ ಬ್ರಿಟಿಷ ರಿಂದ ರಾಜ್ಯವನ್ನು ಪಡೆದು ಕಾಂಗ್ರೆಸ್ರವರು ರಾಜ್ಯವನ್ನು ಕಟ್ಟಿದರು. ತಂದೆಯು ಹೇಳುತ್ತಾರೆ - ಇದಂತೂ ಮೃಗತೃಷ್ಣ ಸಮಾನ ರಾಜ್ಯವಾಗಿದೆ. ಭಲೆ ಎಷ್ಟೇ ಸುಖವಿರಲಿ ಆದರೆ ಇದೆಲ್ಲವೂ ಬಿಸಿಲುಕುದುರೆ ಇದ್ದಹಾಗೆ. ಬಾಹ್ಯ ಆಡಂಬರ ಬಹಳಷ್ಟು ಇದೆ. ಈ ವಿಜ್ಞಾನವೂ ಸಹ ಸುಮಾರು 100 ವರ್ಷಗಳು ನಡೆಯುತ್ತವೆ. ಈ ದಾದಾರವರು ಮುಂಬೈನಲ್ಲಿ ವ್ಯಾಪಾರ ಮಾಡುತ್ತಿದ್ದಾಗ ವಿದ್ಯುತ್, ಟೆಲಿಫೋನ್ ಮತ್ತ್ಯಾವುದೂ ಇರಲಿಲ್ಲ. ಈಗ ವಿಜ್ಞಾನ ಎಷ್ಟು ಅದ್ಭುತ ಕಾರ್ಯ ಮಾಡಿದೆ. ಈಗ ಸ್ವಲ್ಪ ವರ್ಷಗಳು ಮಾತ್ರ ಉಳಿದಿದೆ. ವಿಜ್ಞಾನದ ಅಹಂ 100 ವರ್ಷಗಳಿಂದ ಪ್ರಾರಂಭವಾಗಿದೆ. ಸತ್ಯಯುಗದಲ್ಲಿ 100 ವರ್ಷಕ್ಕೆ ಏನು ಮಾಡುತ್ತೇವೆ ಎಂದು ಗೊತ್ತಿರುವುದಿಲ್ಲ. ಯಾವುದನ್ನು ನೀವು ಇಲ್ಲಿಂದ ತೆಗೆದುಕೊಂಡು ಹೋಗುತ್ತೀರಿ ಆ ಎಲ್ಲಾ ವಸ್ತುಗಳಲ್ಲಿ ಶಕ್ತಿ ಇರುತ್ತದೆ. ಅಖಂಡ, ಅಟಲ, ಸುಖ-ಶಾಂತಿಮಯ ರಾಜ್ಯವನ್ನು ಮಾಡಲು ನೀವು ಶಕ್ತಿಯನ್ನು ತೆಗೆದುಕೊಂಡು ಹೋಗುತ್ತೀರಿ ಅಂದಾಗ ವಿದ್ಯೆಯಕಡೆ ಅಷ್ಟೊಂದು ಗಮನ ಕೊಡಬೇಕಾಗಿದೆ. ಅಷ್ಟೊಂದು ಪುರುಷಾರ್ಥ ಮಾಡಬೇಕಾಗಿದೆ.

ಈ ಮಾತಾ-ಪಿತರಿಂದ ಅಪಾರವಾದ ಸುಖ ಸಿಗುತ್ತದೆ ಎಂದು ನೀವು ತಿಳಿದಿದ್ದೀರಿ. ಒಂದುವೇಳೆ ನಡೆಯುತ್ತಾ-ನಡೆಯುತ್ತಾ ಬಿಟ್ಟುಬಿಡುತ್ತಾರೆಂದರೆ ಏನೂ ಕೇಳುವುದಿಲ್ಲ. ಕೇಳಿದರೂ ಕೇಳದ ಹಾಗೆ ತಮ್ಮ ವ್ಯಾಪಾರ, ವ್ಯವಹಾರಗಳಲ್ಲಿ ತೊಡಗಿದ್ದರು ಅಂದರೆ ಅವರು ಸಮಾಪ್ತಿ ಎಂದರ್ಥ. ಯಾರು ಪಡೆಯುತ್ತಾರೆಯೋ ಅವರು ಪಡೆಯುತ್ತಾರೆ. ಕೈಬಿಟ್ಟ ನಂತರ ಮಾಯೆ ಒಂದೇ ಸಾರಿ ಹಿಡಿದುಕೊಂಡುಬಿಡುತ್ತದೆ. ಆನೆಯನ್ನು, ಮಾಯಾ ಮೊಸಳೆ ಹಿಡಿದುಕೊಂಡ ಹಾಗೆ. ಇದಂತೂ ಆಗಲೇಬೇಕಾಗಿದೆ. ನೀವಂತೂ ನೋಡುತ್ತೀರಿ, ಹೇಗೆ ಒಳ್ಳೊಳ್ಳೆ ದೊಡ್ಡ-ದೊಡ್ಡ ನಿಮಂತ್ರಣ ನೀಡುವಂತಹವರು ಸೇವಾಕೇಂದ್ರಗಳನ್ನು ತೆರೆಯುವಂತಹವರೂ ಸಹ ವಿಧ್ಯೆಯನ್ನು ಬಿಟ್ಟುಬಿಡುತ್ತಾರೆ. ನಾಟಕದನುಸಾರ ಇವರ ಅದೃಷ್ಟದಲ್ಲಿ ಇಷ್ಟೇ ಇತ್ತು ಎಂದು ಹೇಳಲಾಗುತ್ತದೆ ನಂತರ ಅವರ ಸ್ಥಿತಿ ಏನಾಗುತ್ತದೆ? ಮಾಯೆಯು ಸಂಪೂರ್ಣ ತಿಂದು ಹಾಕಿಬಿಡುತ್ತದೆ. ಎಷ್ಟೊಂದು ಜನ ಸಮಾಪ್ತಿ ಆದರು? ಬಹಳ ಧ್ಯಾನದಲ್ಲಿ ಹೋಗುವಂತಹವರು ಆಟ-ಪಾಠ ಮಾಡುವಂತಹವರು ಈ ದಿನ ಇಲ್ಲವೇ ಇಲ್ಲ. ಧ್ಯಾನಾವಸ್ಥೆಯಲ್ಲಿ ಹೋಗುವ ಆಸೆಯನ್ನು ಎಂದೂ ಇಟ್ಟುಕೊಳ್ಳಬಾರದು. ಆಸೆ ಇಟ್ಟುಕೊಂಡರೆ ಆಸೆಯಲ್ಲಿಯೇ ವಿಘ್ನ ಬಂದುಬಿಡುತ್ತದೆ. ಮಾಯೆಯ ಭೂತವೂ ಸಹ ಪ್ರವೇಶ ಆಗಿಬಿಡುತ್ತದೆ. ಧ್ಯಾನದ ಪಾತ್ರವನ್ನು ಎಷ್ಟೊಂದು ಮಾಡುತ್ತಿದ್ದರು, ಯಾರು 5, 7 ದಿನ ಧ್ಯಾನದಲ್ಲಿ ಬಾಲ್ಯತನದ ಪಾತ್ರದಲ್ಲಿ ಇರುತ್ತಿದ್ದರೋ ಮಹಾರಥಿಗಳು ಆಗುತ್ತಿದ್ದರೋ ಅವರು ಈ ದಿನ ಇಲ್ಲವೇ ಇಲ್ಲ. ಇದರಿಂದ ಯಾವುದೇ ಲಾಭವಿಲ್ಲ. ಜ್ಞಾನದ ಪರಿಪಕ್ವ ಅವಸ್ಥೆಯಲ್ಲಿ ಇರುವಂತಹವರೇ ಸದಾ ಕಾಲ ಇರಲು ಸಾಧ್ಯ. ಎಂದೂ ಸಹ ಧ್ಯಾನದಲ್ಲಿ ಹೋಗುವ ಆಸೆಯನ್ನು ಇಟ್ಟುಕೊಳ್ಳಬಾರದು. ತಂದೆಯು ಏನನ್ನು ಓದಿಸುತ್ತಾರೆಯೋ ಅದನ್ನು ಧಾರಣೆ ಮಾಡಬೇಕು. ಎಷ್ಟು ಓದುತ್ತೀರೋ ಅಷ್ಟು ಶ್ರೇಷ್ಟ ಪದವಿಯನ್ನು ಪಡೆಯುತ್ತೀರಿ. ನಮಗೆ ಪರಮಪಿತ ಪರಮಾತ್ಮ ಓದಿಸುತ್ತಾರೆ ಎಂಬುದು ನೀವು ಮಕ್ಕಳು ನೆನಪಿಟ್ಟುಕೊಳ್ಳಬೇಕು. ನಾವು ಓದಿ 21 ಜನ್ಮಗಳವರೆಗೆ ಆಸ್ತಿಯನ್ನು, ಶ್ರೇಷ್ಠ ಪದವಿಯನ್ನು ಪಡೆಯುತ್ತೇವೆ ನಂತರ ನಾವೇ ಪೂಜ್ಯರಿಂದ ಪೂಜಾರಿಗಳಾಗುತ್ತೇವೆ. ಇದನ್ನು ಬ್ರಾಹ್ಮಣ ಕುಲದವರಾಗುತ್ತಾರೆ ಹೇಳಲು ಸಾಧ್ಯವಿದೆ ಬೇರೆ ಯಾರೂ ಈ ರೀತಿ ಹೇಳಲು ಸಾಧ್ಯವಿಲ್ಲ. ಭಾರತದ ಆಟ ಮಾಡಲ್ಪಟ್ಟಿದೆ. ನಾವೇ ಪೂಜ್ಯ ದೇವೀ-ದೇವತೆಗಳಾಗುತ್ತೇವೆಂದು ಹೇಳುತ್ತೀರಿ. ಪೂಜ್ಯರೇ ನಂತರ ಪೂರ್ಣ ಕೆಳಗೆ ಇಳಿದು 84 ಜನ್ಮಗಳನ್ನು ತೆಗೆದುಕೊಳ್ಳುತ್ತೀರಿ. ಮಕ್ಕಳಿಗೆ ಇದೆಲ್ಲವೂ ತಿಳಿದಿದೆ. ಶಿವತಂದೆಯ ಕರ್ತವ್ಯವನ್ನೂ ಸಹ ನೀವು ತಿಳಿದಿದ್ದೀರಿ. ಸೆಕೆಂಡಿನ ನಿಶ್ಚಯದಿಂದ ನೀವು ಆಸ್ತಿಯನ್ನು ತೆಗೆದುಕೊಳ್ಳಬಹುದಾಗಿದೆ. ನಾವು ಈಶ್ವರನವರಾಗಿದ್ದೇವೆ ಎಂದು ಹೇಳುತ್ತಾರೆ ಮತ್ತು ಈಶ್ವರನಿಗೆ ವಿಚ್ಛೇದನ ಕೊಡುವುದು ಎಷ್ಟು ವಿಚಿತ್ರವಾಗಿದೆ. ಶಾಲೆಯಲ್ಲಿ ಓದುತ್ತೀರಿ, ಒಳ್ಳೆಯ ಅಂಕಗಳಲ್ಲಿ ಉತ್ತೀರ್ಣರಾದರೆಂದರೆ ಅವರನ್ನು ಸುಪುತ್ರರೆಂದು ತಿಳಿದುಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳೂ ಸಹ ತಮ್ಮನ್ನು ಸುಪುತ್ರರೆಂದು ತಿಳಿದುಕೊಳ್ಳಬೇಕಾಗುತ್ತದೆ. ತಂದೆ ಮತ್ತು ಶಿಕ್ಷಕರೂ ಸಹ ಇವರು ಸುಪುತ್ರರೆಂದು ತಿಳಿಯುತ್ತಾರೆ. ಇಲ್ಲಂತೂ ತಂದೆ-ಶಿಕ್ಷಕ-ಗುರು ಒಬ್ಬರೇ ಆಗಿದ್ದಾರೆ. ತಂದೆಯೂ ಸಹ ಮತ್ತೆ ಶಿಕ್ಷಕನಾಗಿ ನಿಮ್ಮನ್ನು ಓದಿಸುತ್ತಾರೆ. ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ನಿಮ್ಮ ಜ್ಯೋತಿ ನಂದಲ್ಪಟ್ಟಿದೆ. ಈಗ ಜಾಗೃತವಾಗುತ್ತಿದೆ. ನನ್ನ ಜ್ಯೋತಿ ಸದಾ ಬೆಳಗಿರುತ್ತದೆ, ಇದೆಲ್ಲವೂ ಆತ್ಮನ ಮಾತಾಗಿದೆ. ನಾವು ಆತ್ಮರು ಅಶರೀರಿಯಾಗಿ ಬಂದಿದ್ದೇವೆ ಮತ್ತು ಅಶರೀರಿಯಾಗಿ ಹೋಗಬೇಕಾಗಿದೆ ಎಂಬುದನ್ನು ನೀವು ತಿಳಿದಿದ್ದೀರಿ. ನಮ್ಮ ಆಟ ಪೂರ್ಣವಾಗಿ ಈಗ ಮತ್ತೆ ಪುನರಾವರ್ತನೆ ಆಗಲಿದೆ. ಇದು ನೀವು ಮಕ್ಕಳ ಬುದ್ಧಿಯಲ್ಲಿ ತಿಳಿದಿದೆ.

ನೀವು ಮಾತಾ-ಪಿತ......ನಿಮ್ಮ ವಿದ್ಯೆಯ ಕೃಪೆಯಿಂದ ನಮಗೆ ಎಷ್ಟೊಂದು ಸುಖ, ಸಂಪತ್ತು ಸಿಗುತ್ತದೆ. ಇಂತಹ ಮಾತಾ-ಪಿತರನ್ನು ಎಂದೂ ಸಹ ಮರೆಯಬಾರದು. ಕೈ ಬಿಡಬಾರದಾಗಿದೆ. ತಂದೆಯು ತಿಳಿಸುತ್ತಾರೆ - ಇಂತಹ ಮಾತಾ-ಪಿತ, ಬಾಪ್ದಾದಾರವರಿಗೆ ಯಾರು ನಿಮಗೆ ಇಷ್ಟೊಂದು ಆಸ್ತಿಯನ್ನು ಕೊಡುತ್ತಾರೆಯೋ ಅವರಿಗೆ ಪತ್ರವನ್ನು ಬರೆದಿದ್ದೇ ಆದರೆ ತಂದೆಯು ತಿಳಿಸುತ್ತಾರೆ - ಇವರು ನೆನಪು ಮಾಡುತ್ತಿದ್ದಾರೆಂದು. ತಂದೆಯ ನೆನಪು ಪ್ರೀತಿಯಂತೂ ಪ್ರತಿದಿನ ಮುರಳಿಯಲ್ಲಿ ಬರುತ್ತದೆ. ಮಕ್ಕಳ ಪತ್ರ ನಿಧಾನವಾಗಿ ಬರುತ್ತದೆ ಎಂದರೆ ಇವರು ನೆನಪು ಮಾಡುತ್ತಿಲ್ಲವೆಂದು ತಿಳಿಯುತ್ತೇವೆ. ತಂದೆಗಂತೂ ಪತ್ರ ಬರೆಯುವ ಅವಶ್ಯಕತೆ ಇಲ್ಲ, ತಂದೆಯ ಮುರಳಿಯೂ ನಿತ್ಯವೂ ಬರುತ್ತಿರುತ್ತದೆ. ನೆನಪು-ಪ್ರೀತಿಯನ್ನು ತಂದೆಯು ಕೊಡುತ್ತಿರುತ್ತಾರೆ ಅವರು ಜಾಗೃತ ಜ್ಯೋತಿ ಆಗಿದ್ದಾರೆ. ಮಕ್ಕಳಿಗೆ ಅವಶ್ಯವಾಗಿ ಪತ್ರವನ್ನು ಬರೆಯುತ್ತೇವೆ ಎಂದು ಹೇಳುತ್ತಾರೆ, ಅನ್ಯ ಮಕ್ಕಳ ಚಿಂತೆ ಇರುವುದಿಲ್ಲ. ಮರೆಯಬೇಡಿ, ಓದುತ್ತಾ ಇರಿ ಎಂದು ಅಲುಗಾಡುವವರಿಗೆ ಎಚ್ಚರಿಕೆಯನ್ನು ಕೊಡಲಾಗುತ್ತದೆ. ಸಮಾಚಾರವಂತೂ ತಂದೆಯ ಬಳಿ ಬರುತ್ತಾ ಇರುತ್ತದೆಯಲ್ಲವೆ. ರಿಜಿಸ್ಟರಿನಲ್ಲಿ ಹೆಸರು ನೊಂದಾಯಿಸಿರುತ್ತದೆ. ಈ ಮಗು ಏಕೆ ಬಂದಿಲ್ಲ ಎಂದು ಕೇಳಲಾಗುತ್ತದೆ. ನಿತ್ಯವೂ ಗೈರು ಹಾಜರಿ ಆಗಿದೆ ಎಂದರೆ ಇವರು ಸತ್ತು ಹೋದರೆಂದು ತಿಳಿದುಕೊಳ್ಳಲಾಗುತ್ತದೆ. ಈ ಮಗುವಿನ ಸಮಾಚಾರ ಏನೂ ಬರಲಿಲ್ಲವೇ? ಎಂದು ತಂದೆಯು ಕೇಳುತ್ತಾರೆ. ಇಂತಹವರು ಬರುತ್ತಿಲ್ಲ, ಸಂಶಯ ಬುದ್ಧಿವುಳ್ಳವರಾಗಿದ್ದಾರೆ ಎಂದು ಬರೆಯುತ್ತಾರೆ. ಒಳ್ಳೆಯದು. ಮುಂದೆ ಹೋದಂತೆ ನಿಶ್ಚಯ ಬುದ್ಧಿವುಳ್ಳಂತಹವರಾಗಬಹುದು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ವಿಜಯ ಮಾಲೆಯಲ್ಲಿ ಬರುವಂತಹ ಸಾಹಸವನ್ನು ತೋರಿಸಬೇಕಾಗಿದೆ. ಸ್ಮರಣೆಗೆ ಯೋಗ್ಯರಾಗಲು ಎಲ್ಲರಿಗೂ ಸುಖವನ್ನು ಕೊಡಬೇಕಾಗಿದೆ.

2. ಸುಪುತ್ರವಿದ್ಯಾರ್ಥಿಗಳಾಗಿ ತಂದೆ, ಶಿಕ್ಷಕರ ಹೆಸರನ್ನು ಪ್ರಸಿದ್ಧಿ ಮಾಡಬೇಕಾಗಿದೆ. ಎಂದೂ ಸಹ ಕಾಮ ಅಥವಾ ಕ್ರೋಧಕ್ಕೆ ವಶೀಭೂತರಾಗಿ ಉಲ್ಟಾಕರ್ಮವನ್ನು ಮಾಡಬಾರದು.

ವರದಾನ: ಮಾಡಿ ಮಾಡಿಸುವಂತಹವರು ಎನ್ನುವ ಸ್ಮೃತಿಯಿಂದ ವಿಘ್ನಗಳ ಬೀಜವನ್ನು ಸಮಾಪ್ತಿ ಮಾಡುವಂತಹ ಸಮರ್ಥ ಆತ್ಮ ಭವ.

ಸರ್ವ ಪ್ರಕಾರದ ವಿಘ್ನಗಳ ಬೀಜ ಎರಡು ಮಾತಿನಲ್ಲಿದ: 1. ಅಭಿಮಾನ ಮತ್ತು 2. ಅಪಮಾನ. ಸೇವೆಯ ಕ್ಷೇತ್ರದಲ್ಲಿ ಅಭಿಮಾನ ಬರುವುದು. ನಾನು ಇದನ್ನು ಮಾಡಿದೆ, ನಾನೇ ಮಾಡಲು ಸಾಧ್ಯ..... ಇಲ್ಲಾ ನನ್ನನ್ನು ಏಕೆ ಮುಂದೆ ಇಡಲಿಲ್ಲ, ನನಗೇ ಏಕೆ ಹೀಗೆ ಹೇಳಿದರು, ಇವರು ನನಗೆ ಅಪಮಾನ ಮಾಡಿದರು. ಇದೇ ಭಾವನೆ ಭಿನ್ನ-ಭಿನ್ನ ವಿಘ್ನಗಳ ರೂಪದಲ್ಲಿ ಬರುವುದು. ಯಾವಾಗ ಈಶ್ವರೀಯ ಸೇವಾಧಾರಿಯಾಗಿರುವಿರಿ, ಮಾಡಿ ಮಾಡಿಸುವಂತಹವರು ತಂದೆ ಇದ್ದಾರೆ ಎಂದಾಗ ಅಭಿಮಾನ ಎಲ್ಲಿಂದ ಬಂತು, ಅಪಮಾನ ಎಲ್ಲಾಯಿತು? ಆದ್ದರಿಂದ ಕಂಭೈಂಡ್ ರೂಪದ ಸ್ಮೃತಿಯ ಮೂಲಕ ಸಮರ್ಥ ಆತ್ಮ ಆದಾಗ ವಿಘ್ನಗಳ ಬೀಜ ಸದಾಕಾಲಕ್ಕಾಗಿ ಸಮಾಪ್ತಿಯಾಗಿ ಬಿಡುವುದು.

ಸ್ಲೋಗನ್: ಜ್ಞಾನ ಸ್ವರೂಪರಾಗಬೇಕಾದರೆ ತಂದೆ ಮತ್ತು ವಿದ್ಯೆಯ ಮೇಲೆ ಸಮನಾದ ಪ್ರೀತಿ ಇರಲಿ.